ಎಲ್ಲ ಪುರಸಭೆಗಳನ್ನು ಪೌರಾಡಳಿತ ನಿರ್ದೇಶನಾಲಯದ ಅಧೀನಕ್ಕೆ ಒಳಪಡಿಸುವ ಬಗ್ಗೆ

೧೨೦೩. ಶ್ರೀ ಎ. ಎಂ. ಹಿಂಡಸಗೇರಿ (ಹುಬ್ಬಳ್ಳಿ).—ಮಾನ್ಯ ನಗರಾಭಿವೃದ್ಧಿ ಹಾಗೂ ಕಾನೂನು ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ಮಹಾನಗರ ಪಾಲಿಕೆಯನ್ನು ಹೊರತುಪಡಿಸಿ ಎಲ್ಲಾ ಪುರಸಭೆಗಳನ್ನು ಪೌರಾಡಳಿತ ನಿರ್ದೇಶನಾಲಯದ ಅಧೀನಕ್ಕೆ ಒಳಪಡಿಸುವ ಪ್ರಸ್ತಾಪನೆ ಏನಾದರೂ ಸರ್ಕಾರದ ಮುಂದಿದೆಯೇ ?

ಆ) ಒಂದು ಪುರಸಭೆಯಿಂದ ಮತ್ತೊಂದು ಮಹಾನಗರ ಪಾಲಿಕೆಗೆ ಅಥವಾ ಬೇರೆಡೆ ವರ್ಗಾಯಿಸಲು ಅವಕಾಶವನ್ನು ಒದಗಿಸಿ ಸಾಮಾನ್ಯ ಕರ್ನಾಟಕ ಮಹಾನಗರ ಪಾಲಿಕೆಗಳ ಕಾಯ್ದೆ ೧೯೭೬ರನ್ನು ರಚಿಸಿ ಮತ್ತು ಅನುಷ್ಠಾನಕ್ಕೆ ತರುವ ಬಗ್ಗೆ ಸರ್ಕಾರದ ನಿಲುವೇನು ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಹಾಗೂ ಕಾನೂನು ರಾಜ್ಯ ಮಂತ್ರಿಗಳು).—

ಅ) ಇಲ್ಲ. ಆದರೆ ಎಲ್ಲಾ ಪುರಸಭೆಗಳನ್ನು ಪೌರಾಡಳಿತ ನಿರ್ದೇಶನಾಲಯದ ಅಧೀನಕ್ಕೆ ಒಳಪಡಿಸಲು ಉದ್ದೇಶಿಸಿದೆ.

ಆ) ರಾಜ್ಯದಲ್ಲಿ ಆರು ಮಹಾನಗರ ಪಾಲಿಕೆಗಳಿಗೆ ಅನ್ವಯವಾಗುವಂತೆ ಸಾಮಾನ್ಯ ಕಾನೂನು ಅಂದರೆ ಕರ್ನಾಟಕ ಮಹಾನಗರ ಪಾಲಿಕೆಗಳ ಕಾಯ್ದೆ ೧೯೭೬ ಅಸ್ತಿತ್ವದಲ್ಲಿರುತ್ತದೆ. ಆದರಲ್ಲಿ ಕಲಂ ೯೧ ಎ ಪ್ರಕಾರ ನಾಮಕರಣ ಒಂದು ಮಹಾನಗರ ಪಾಲಿಕೆಯಿಂದ ಮತ್ತೊಂದು ಮಹಾನಗರಪಾಲಿಕೆಗೆ ವರ್ಗಾವಣೆ ಮಾಡಲು ಕಾಯ್ದೆಯಲ್ಲಿ ಅವಕಾಶ ವಿರುತ್ತದೆ ಆದರಂತೆಯೇ ಕರ್ನಾಟಕ ಪುರಸಭಾ ಕಾಯ್ದೆ ೧೯೬೪ರ ಕಲಂ ೩೨೦ ಪ್ರಕಾರ ಪುರಸಭಾ ನೌಕರನನ್ನು ಒಂದು ಪುರಸಭೆಯಿಂದ ಮತ್ತೊಂದು ಪುರಸಭೆಗೆ ಮತ್ತು ಮಹಾನಗರಪಾಲಿಕೆಗಳನ್ನೊಳಗೊಂಡಂತೆ ಯಾವುದೇ ಸ್ಥಳೀಯ ಸಂಸ್ಥೆಗಳಿಗೆ ವರ್ಗಾವಣೆ ಮಾಡಲು ಅವಕಾಶವಿರುತ್ತದೆ.

ತುಮಕೂರಿನಲ್ಲಿ ವಸತಿ ಸಮಸ್ಯೆಗಳು

೧೨೧೩. ಶ್ರೀ ಸಿ.ಎನ್. ಭಾಸ್ಕರಪ್ಪ (ಬೆಳ್ಳಾವಿ).—ಮಾನ್ಯ ಸಾರಿಗೆ ಹಾಗೂ ವಸತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತುಮಕೂರಿನಲ್ಲಿ ಮನೆಗಳಿಗಾಗಿ ತೀವ್ರ ಬೇಡಿಕೆಗಳಿರುವುದರಿಂದ ಈ ಸಮಸ್ಯೆಯನ್ನು ಪರಿಹರಿಸಲು ಗೃಹ ನಿರ್ಮಾಣ ಮಂಡಳಿಯವರು ಏನಾದರೂ ಕಾರ್ಯಕ್ರಮ ಹಾಕಿಕೊಂಡಿದ್ದಾರೆಯೇ ?

ಆ) ಹಾಗಿದ್ದಲ್ಲಿ ಅದರ ರೂಪರೇಖೆಗಳೇನು? ಅವು ಕಾರ್ಯಗತವಾಗುವುದು ಯಾವಾಗ?

ಶ್ರೀ ಸಿ.ಜಿ.ಆರ್. ಸಿಂಧ್ಯ (ಸಾರಿಗೆ ಹಾಗೂ ವಸತಿ ರಾಜ್ಯ ಮಂತ್ರಿಗಳು).—

ಅ) ಹೌದು.

ಆ) ಈಗಾಗಲೇ ತುಮಕೂರಿನಲ್ಲಿ ಹುಡ್ಕೋ ವತಿಯಿಂದ ಮನೆ ಕಟ್ಟಲು ಕರ್ನಾಟಕ ಗೃಹ ಮಂಡಳಿಯು ಭೂ ಸ್ವಾಧೀನ ಕ್ರಮ ಜರುಗಿಸಿದ್ದು, ಭೂ ಸ್ವಾಧೀನಕ್ಕೆ ಬಂದ ತಕ್ಷಣ ಮನೆಗಳ ನಿರ್ಮಾಣ ಕಾರ್ಯ ಕೈಗೆತ್ತಿಕೊಳ್ಳಲಾಗುವುದು.